

## ಕಳೆಗುಂದುತ್ತಿದೆ ಮಹಾಲಿಂಗಪುರ ಬೆಲ್ಲದ ಪೇಟೆಯ ಖ್ಯಾತಿ

# ಸೊರಗಿದ ಪೇಟೆ ಕ್ಷೀಣಿಸಿದ ಸವಿ

ಮಹಾಲಿಂಗಪುರ ಬೆಲ್ಲದ ವಹಿವಾಟಿಗೆ ದೇಶದಲ್ಲೇ ಪ್ರಸಿದ್ಧಿ ಪಡೆದಿದ್ದ ಪಟ್ಟಣ. ಸಕ್ಕರೆ ಕಾರ್ಖಾನೆಗಳ ಅಬ್ಬರದಿಂದಾಗಿ, ಆಲೆಮನೆಗಳು ಹಿನ್ನೆಲೆಗೆ ಸರಿದಂತೆ ಬೆಲ್ಲದ ಪೇಟೆಯೂ ಕಳೆಗುಂದಿದೆ. ಹಳೆಯ ಖ್ಯಾತಿಯನ್ನೇ ನೆಚ್ಚಿಕೊಂಡಿರುವ ಮಹಾಲಿಂಗಪುರದ ಬೆಲ್ಲದ ಮಾರುಕಟ್ಟೆ ಕಾಯಕಲ್ಪದ ನಿರೀಕ್ಷೆಯಲ್ಲಿದೆ.

■ ಲಕ್ಷ್ಮಣ ಕಿಶೋರ

> ಬೆಲ್ಲ ಸರಿಯಾಗಿ ಬಾರದೆ ಮಾರುಕಟ್ಟೆಯ 89 ಅಂಗಡಿಗಳಲ್ಲಿ 30 ಅಂಗಡಿಗಳು ಕಾರ್ಯ ನಿರ್ವಹಿಸುತ್ತಿವೆ. ಉಳಿದವು ಬಂದಾಗಿ, ಹೆಸರಿಗೆ ಮಾತ್ರ ಲೈಸೆನ್ಸ್ ಹೊಂದಿವೆ.
>
> -ಎಸ್.ಎನ್. ಪತ್ತಾರ, ಎ.ಪಿ.ಎಂ.ಸಿ. ಕಾರ್ಯದರ್ಶಿ

